# ಇಂದು ಇಂದಿಗೆ ನಾಳೆ ನಾಳೆಗೆ...



ಚಿತ್ರ: ಸತೀಶ್ ಬಡಿಗೇರ

ನಾವು ಯಾವಾಗಲೂ ನಾಳೆ ಮಾಡಬೇಕು ಎನಿಸುವ ಕೆಲಸವನ್ನು ಇವತ್ತೇ ಮಾಡಬೇಕು. ನಾಳೆಯ ಸಂಕಲ್ಪವನ್ನು ಇವತ್ತೇ ಕಾರ್ಯರೂಪಕ್ಕೆ ತಂದರೆ ನಾಳೆಯ ಬಾಳು ಸುಗಮವಾಗುತ್ತದೆ.

■ ಡಾ. ವಿನಯ ಶ್ರೀನಿವಾಸ್

ಬಹಳ ವರ್ಷಗಳ ನಂತರ ಹಳ್ಳಿಯಲ್ಲಿದ್ದ ಅಜ್ಜಿ ಮನೆಗೆ ಹೋಗಿದ್ದೆ. ತನ್ನ ಮಡದಿಯೊಂದಿಗೆ ನಮ್ಮ ಮನೆಗೆ ಬಂದ ಬಾಲ್ಯದ ಗೆಳೆಯ ಸೋಮನನ್ನು ಕಂಡು ಆಶ್ಚರ್ಯವಾಗಿತ್ತು. ಈ ಮೊದಲು ಬಂದಾಗ ಅವನನ್ನು ಕಂಡು ಬಹಳ ಬೇಸರಗೊಂಡಿದ್ದೆ. ಕುಡಿತಕ್ಕೆ ದಾಸನಾಗಿ ಇದ್ದ ನಾಲ್ಕು ಎಕರೆ ಹೊಲವನ್ನೂ ಮಾರಿಕೊಂಡು, ತನ್ನ ಕುಟುಂಬವನ್ನು ಸಂಕಷ್ಟಕ್ಕೆ ಸಿಲುಕಿಸಿದ್ದ. ಆತನ ಪತ್ನಿಯು ಅಳುತ್ತಾ 'ದುಡಿದಿದ್ದೆಲ್ಲ ಕುಡಿತಕ್ಕೆ ಹಾಕ್ತಾರೆ, ನೀವಾದ್ರೂ ಹೇಳಿ ಅಕ್ಕಾ' ಎಂದು ನನ್ನನ್ನು ಕೇಳಿಕೊಂಡಿದ್ದೂ ಇದೆ. ಆದರೆ, ಇಂದು ಸೋಮ ಸಂಪೂರ್ಣ ಬದಲಾಗಿದ್ದ. ಆತನ ಹೆಂಡತಿಯೂ ಖುಷಿಯಿಂದ 'ದೇವರು ದೊಡ್ಡೋನು ಅಕ್ಕ, ನಮ್ಮೇನವ್ರು ಕುಡಿಯೋದು ಬಿಟ್ಟು ಬಿಟ್ಟಿದಾರೆ' ಎಂದಿದ್ದಳು.

ಸುಮಾರು ಹದಿನೈದು ಇಪ್ಪತ್ತು ವರ್ಷಗಳಿಂದ ಮದ್ಯಪಾನದ ಚಟವನ್ನು ಅಂಟಿಸಿಕೊಂಡಿದ್ದ ಸೋಮನಿಗೆ ಕುಡಿತವನ್ನು ಬಿಡಿಸಲು ಆತನ ಹೆಂಡತಿಯೂ ಬಹಳಷ್ಟು ಪ್ರಯತ್ನ ಮಾಡಿದ್ದಳು. ಆದರೆ, ಪ್ರತಿಬಾರಿಯೂ ಅವನದ್ದು 'ನಾಳೆಯಿಂದ ಬಿಡ್ತೀನಿ, ಮುಂದಿನ ವರ್ಷದಿಂದ ಸರಿಹೋಗ್ತೀನಿ' ಎನ್ನುವ ರಾಗವೇ. ಹಾಗೆ ಹೇಳುತ್ತಲೇ ಎಲ್ಲರ ಬಾಯಿ ಮುಚ್ಚಿಸುತ್ತಿದ್ದ.